ರಾಜ್ಯದಲ್ಲಿ ಹೊಸದಾಗಿ ವೈದ್ಯ/ದಂತ ಕಾಲೇಜುಗಳ ಸ್ಥಾಪನೆ

2937 - ಶ್ರೀ ರಾಮದಾಸ್ ಎ (ಕೃಷ್ಣರಾಜಾ) : ಮಾನ್ಯ ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಹೊಸ ವೈದ್ಯಕೀಯ ಮತ್ತು ದಂತ ಕಾಲೇಜು ಪ್ರಾರಂಭಿಸಲು ಸರ್ಕಾರದ ಪರವಾನಿಗೆ ನೀಡಿದೆಯೇ?

ಆ) ಹೊಸ ಕಾಲೇಜು ಪ್ರಾರಂಭಿಸಲು ಅನುಮತಿ ನೀಡುವ ಸಂಬಂಧ, ಉನ್ನತ ಮಟ್ಟದ ಸಮಿತಿ ರಚಿಸಲಾಗಿತ್ತೇ? ಸಮಿತಿಯಲ್ಲಿದ್ದ ಸದಸ್ಯರು ಯಾರು ಯಾರು?

ಇ) ರಾಜ್ಯ ಸರ್ಕಾರ ಯಾವ ಯಾವ ಸಂಸ್ಥೆಗಳಿಗೆ ವೈದ್ಯಕೀಯ ಕಾಲೇಜುಗಳನ್ನು ಸ್ಥಾಪಿಸಲು ಅನುಮತಿ ನೀಡಿದೆ?

ಈ) ಡಾ|| ಸುದರ್ಶನ್‌ರವರ ಮಧ್ಯಕಾಲಿಕ ವರದಿಯಲ್ಲಿ ಹೊಸ ವೈದ್ಯಕೀಯ ಕಾಲೇಜುಗಳ ಸ್ಥಾಪನೆಗೆ ವಿರೋಧ ಇದೆಯೇ?

ಶ್ರೀಮತಿ ನಫೀಸಾ ಫಜಲ್ (ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರು) :

ಅ) ಭಾರತೀಯ ವೈದ್ಯ ಪರಿಷತ್ತಿನ ತಿದ್ದುಪಡಿ ವಿಧೇಯಕ 1993 ಮತ್ತು ಭಾರತೀಯ ದಂತ ಪರಿಷತ್ತಿನ ತಿದ್ದಪಡಿ ವಿಧೇಯಕ 1993ರ ಅನ್ವಯ ರಾಜ್ಯ ಸರ್ಕಾರಕ್ಕೆ ಹೊಸ ವೈದ್ಯಕೀಯ ದಂತ ಕಾಲೇಜುಗಳಿಗೆ ಪರವಾನಿಗೆ ನೀಡಲು ಅಧಿಕಾರವಿರುವುದಿಲ್ಲ. ರಾಜ್ಯ ಸರ್ಕಾರವು ಕೇಂದ್ರ ಸರ್ಕಾರಕ್ಕೆ ಅವಶ್ಯಕತಾ ಹಾಗೂ ಅಗತ್ಯತಾ ಪ್ರಮಾಣ ಪತ್ರವನ್ನು ನೀಡಬಹುದಾಗಿದೆ.

ಆ) ಹೊಸ ಕಾಲೇಜುಗಳನ್ನು ಪ್ರಾರಂಭಿಸಲು ಉನ್ನತ ಮಟ್ಟದ ಸಮಿತಿಯನ್ನು ರಚಿಸಿರುವುದಿಲ್ಲ, ಆದರೆ ಹಿಂದಿನ ಸರ್ಕಾರ ತೆಗೆದುಕೊಂಡ ತೀರ್ಮಾನಗಳನ್ನು ಪುನರ್ ಪರಿಶೀಲಿಸಲು ಸಚಿವ ಸಂಪುಟದ ಉಪ ಸಮಿತಿಯನ್ನು ರಚಿಸಲಾಗಿತ್ತು.

1)	ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು	-	ಅಧ್ಯಕ್ಷರು
2)	ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು	-	ಸದಸ್ಯರು
3)	ಮಾನ್ಯ ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರು	-	ಸದಸ್ಯರು

ಇ) ರಾಜ್ಯ ಸರ್ಕಾರವು 2000ನೇ ಸಾಲಿನಲ್ಲಿ ಈ ಕೆಳಕಂಡ ಅವಶ್ಯಕತಾ ಪ್ರಮಾಣ ಪತ್ರವನ್ನು ಮಾತ್ರ ನೀಡಿದೆ.

1) ಲಕ್ಷ್ಮೀ ಮೆಮೋರಿಯಲ್ ಎಜುಕೇಷನ್ ಟ್ರಸ್ಟ್ ಮಂಗಳೂರು

2) ಚಿಲ್ಡ್ರನ್ಸ್ ಎಜುಕೇಷನ್ ಸೊಸೈಟಿ, ಬೆಂಗಳೂರು

3) ವೆಂಕಟೇಶ ಎಜುಕೇಷನ್ ಸೊಸೈಟಿ, ಬೆಂಗಳೂರು

ಈ) -ಹೌದು-

ವೈದ್ಯಕೀಯ ಕಾಲೇಜು ಆಸ್ಪತ್ರೆಗಳಿಗೆ ಹೊರ ದೇಶದಿಂದ ಪಡೆಯುತ್ತಿರುವ ಸಾಲ

2938 - ಶ್ರೀ ರಾಮದಾಸ್. ಎ. (ಕೃಷ್ಣರಾಜಾ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಗಳಿಗಾಗಿ ಹೊರದೇಶದಿಂದ ಪಡೆಯುತ್ತಿರುವ ಸಾಲ ಮತ್ತು ಸಹಾಯ ಧನ ಎಷ್ಟು? ಯಾವ ಯಾವ ದೇಶದಿಂದ ಈ ಸಾಲ ಮತ್ತು ಸಹಾಯಧನ ಪಡೆಯಲಾಗುತ್ತಿದೆ? ಈ ಸಾಲಕ್ಕೆ ಬಡ್ಡಿ ದರ ಎಷ್ಟು?*

ಆ) *ಈ ಸಾಲದ ಹಣವನ್ನು ಯಾವ ಯಾವ ಆಸ್ಪತ್ರೆಗಳಿಗೆ ಯಾವ ಯಾವ ರೂಪದಲ್ಲಿ ವಿರ್ಚು ಮಾಡಲು ಯೋಜಿಸಲಾಗಿದೆ?*

ಇ) *ಮೈಸೂರು ಚೆಲುವಾಂಬಾ ಕೆ.ಆರ್. ಆಸ್ಪತ್ರೆ ಮತ್ತು ಪಿ.ಕೆ. ಸ್ಯಾನಿಟೋರಿಯಂಗಳ ಅಭಿವೃದ್ಧಿಗೆ ಹಾಕಿಕೊಂಡಿರುವ ಯೋಜನೆಗಳೇನು?*

ಈ) *ಕೆ.ಆರ್. ಆಸ್ಪತ್ರೆಯಲ್ಲಿ ಆಪಘಾತ, ನೆಫ್ರಾಲಜಿ ಮತ್ತು ನ್ಯೂರೋ ಸರ್ಜರಿ ವಿಭಾಗಗಳನ್ನು ತೆರೆಯಲು ಕೈಗೊಳ್ಳುತ್ತಿರುವ ಕ್ರಮಗಳೇನು?*

ಡಾ|| ಎ.ಬಿ. ಮಾಲಕರೆಡ್ಡಿ (ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) ವೈದ್ಯಕೀಯ ಕಾಲೇಜುಗಳ ಅಭಿವೃದ್ಧಿಗಾಗಿ ವಿದೇಶಗಳಿಂದ ಆರ್ಥಿಕ ಸಹಾಯವನ್ನು ಪಡೆದಿರುವುದಿಲ್ಲ. ಆದಾಗ್ಯೂ, 6 ಬೋಧನಾ ಆಸ್ಪತ್ರೆಗಳ ಅಭಿವೃದ್ಧಿಗಾಗಿ ಕೆ.ಹೆಚ್.ಎಸ್.ಡಿ.ಪಿ. ಮುಖಾಂತರ ರೂ. 29.2 ಕೋಟಿಗಳನ್ನು ವಿಶ್ವಬ್ಯಾಂಕಿನ ಆರ್ಥಿಕ ಸಹಾಯ ಪಡೆಯಲಾಗುತ್ತಿದೆ.

ವಿಶ್ವಬ್ಯಾಂಕಿನ ಸಹಾಯವು ಶೇ.70 ರಷ್ಟು ಸಾಲದ ರೂಪದಲ್ಲಿ ಮತ್ತು ಶೇ.30 ರಷ್ಟು ಸಹಾಯಾನುಧಾನದ ರೂಪದಲ್ಲಿ ಭಾರತದ ಸರ್ಕಾರದ ಮುಖಾಂತರ ಬರುತ್ತದೆ. ಭಾರತ ಸರ್ಕಾರವು ಸಾಲದ ಮೇಲೆ ಶೇ.12.5 ರಷ್ಟು ವಾರ್ಷಿಕ ಬಡ್ಡಿಯನ್ನು ವಿಧಿಸುತ್ತದೆ.

ಆ) ಕೆ.ಹೆಚ್.ಎಸ್.ಡಿ.ಪಿ. ಯೋಜನೆಯಡಿ ವೈದ್ಯಕೀಯ ಕಾಲೇಜುಗಳಿಗೆ ಹೊಂದಿಕೊಂಡಿರುವ ಈ ಕೆಳಕಂಡ ಆಸ್ಪತ್ರೆಗಳ ಕಟ್ಟಡದ ಅಭಿವೃದ್ಧಿಗಾಗಿ ಸಿಬ್ಬಂದಿ ತರಬೇತಿ ಹಾಗೂ ಉಪಕರಣಗಳ ಪೂರೈಕೆಗಾಗಿ ಖರ್ಚು ಮಾಡಲು ಯೋಜಿಸಲಾಗಿದೆ.

1. ಕೆ.ಆರ್. ಆಸ್ಪತ್ರೆ 2. ವಿಕ್ಟೋರಿಯಾ ಆಸ್ಪತ್ರೆ 3. ಬೌರಿಂಗ್ ಮತ್ತು ಲೇಡಿಕರ್ಜನ್ ಆಸ್ಪತ್ರೆ 4. ವಾಣಿವಿಲಾಸ ಆಸ್ಪತ್ರೆ 5. ಚೆಲುವಾಂಬಾ ಆಸ್ಪತ್ರೆ 6. ಕರ್ನಾಟಕ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ